International Journal of Kannada Research 2021; 7(1): 70-73

International Journal of Kannada Research
www.kannadajournal.com

**ISSN: 2454–5813**
IJKR 2021; 7(1): 70-73
© 2021 IJKR
www.kannadajournal.com
Received: 04-11-2020
Accepted: 06-12-2020

**ಚೇತನಾ ಹೆಗಡೆ**
ಸಹಾಯಕ ಪ್ರಾಧ್ಯಾಪಕರು
ಮೌಂಟ್ ಕಾರ್ಮೆಲ್ ಕಾಲೇಜು
ಬೆಂಗಳೂರು

**Corresponding Author:**
**ಚೇತನಾ ಹೆಗಡೆ**
ಸಹಾಯಕ ಪ್ರಾಧ್ಯಾಪಕರು
ಮೌಂಟ್ ಕಾರ್ಮೆಲ್ ಕಾಲೇಜು
ಬೆಂಗಳೂರು

# ಉದ್ಯೋಗ ಮತ್ತು ಮಹಿಳೆ

**ಚೇತನಾ ಹೆಗಡೆ**

ಮನುಷ್ಯ ಅಲೆಮಾರಿ ಬದುಕಿಗೆ ವಿದಾಯ ಹೇಳಿ ಸ್ಥಿರ ಜಾಗದಲ್ಲಿ ನೆಲೆ ನಿಂತು ಕೃಷಿ ಆರಂಭಿಸಿದಾಗಲೇ ಅವನ ಸ್ವಾವಲಂಬನೆಯ ಮೊದಲ ಹಂತ ಗಮನಿಸಬಹುದು. ನಾಗರೀಕ ಬದುಕಿಗೆ ಕಾಲಿಟ್ಟು, ವ್ಯವಸಾಯವನ್ನು ತಮ್ಮ ಬದುಕಿನ ಮಾರ್ಗವಾಗಿಸಿಕೊಂಡ ಪುರುಷ ಪ್ರಧಾನ ವ್ಯವಸ್ಥೆ ತನ್ನ ದೃಷ್ಟಿಕೋನಕ್ಕೆ ಅನುಸಾರವಾಗಿ ಶ್ರಮ ವಿಭಜನೆ ಮಾಡಿತು. ಮನೆಯ ಒಳಗೆಯ ವ್ಯವಸ್ಥೆ ಸ್ತ್ರೀ ಪ್ರಪಂಚವಾಗಿ ಹೊರಗಿನ ದುಡಿಮೆ ಪುರುಷನಿಗಾಯಿತು. ಆಕೆ ಮನೆಯೊಳಗೆ ಎಷ್ಟೆ ಶ್ರಮವಹಿಸಿದರೂ ಆರ್ಥಿಕ ಬೆಲೆ ಅದಕ್ಕೆ ಇಂದಿಗೂ ಲಭ್ಯವಾಗಿಲ್ಲ. ಈ ಶ್ರಮ ವಿಭಜನೆ ನಿಧಾನವಾಗಿ ಸ್ತ್ರೀ ಬದುಕಿನ ಎಲ್ಲ ಸ್ತರಗಳಲ್ಲೂ ಅಧೀನತೆ ಹುಟ್ಟಿಹಾಕಿ ಉಸಿರುಕಟ್ಟಿಸುವ ವಾತಾವರಣದಿಂದ ಆಕೆ ಹೊರಬಂದಿದ್ದು ಈಗ ಇತಿಹಾಸ.

ಹೆಣ್ಣಿನ ಶ್ರಮ ಸಮಾಜಕ್ಕೆ ಬೇಕು ಎಂಬ ಪುರುಷನ ಮನಸ್ಥಿತಿ ಬದಲಾವಣೆ ಶಿಕ್ಷಣದಿಂದ ಕಂಡುಬಂದಿತು. ಹೆಣ್ಣು ಹೊಸ ಪಾತ್ರಕ್ಕೆ ತನ್ನನ್ನು ತೆರೆದುಕೊಳ್ಳಲು ಆರಂಭಿಸಿದಳು. ಉದ್ಯೋಗಸ್ಥ ಪತ್ನಿ ಬೇಕು ಎಂಬ ಪುರುಷನ ಮನೋಭಾವ ಅವಳಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಿತು. ಆರ್ಥಿಕ ಮನ್ನಣೆ ಇರುವ ಪುರುಷನ ಲೋಕದಲ್ಲಿ ಹೊಸ ಸಾಧ್ಯತೆಯನ್ನು ತೆರೆಯಿತು. ಆರಂಭದಲ್ಲಿ ಶಿಕ್ಷಕಿ, ನರ್ಸ್, ಆಯಾ ಮುಂತಾದ ಸಹನೆ, ಮಮತೆ ಬೇಡುವ ಕ್ಷೇತ್ರದಲ್ಲಿ ಸ್ತ್ರೀಯರಿಗೆ ಅವಕಾಶ ದೊರೆಯಲಾರಂಭಿಸಿತು. ಉದ್ಯೋಗಸ್ಥ ಮಹಿಳೆಯ ಗೃಹಿಣಿ ಚರ್ಯೆಗೆ ಧಕ್ಕೆ ಆಗದಂತೆ ಉದ್ಯೋಗಾವಕಾಶಗಳನ್ನು ಯಾಜಮಾನ್ಯ ವ್ಯವಸ್ಥೆ ವಿಸ್ತರಿಸಿತು. ಅರೆಕಾಲಿಕ ಉದ್ಯೋಗಗಳ ಅವಕಾಶ, ಮನೆಯಲ್ಲಿ ಮಾಡಬಹುದಾದ ತುಂಡು ಕೆಲಸ ಅವಳಿಗೆ ತೆರೆದುಕೊಂಡವು. ಉದಾಹರಣೆಗೆ ಬೀಡಿ, ಅಗರಬತ್ತಿ ತಯಾರಿಕೆ, ಗೃಹೋತ್ಪನ್ನ ತಯಾರಿಕೆ, ಕೃಷಿ ಕೆಲಸಗಳಲ್ಲಿ ಬೀಜಗಳ ಸಂರಕ್ಷಣೆ, ಶೇಖರಣೆ, ಮರುಬಳಕೆ ಇತ್ಯಾದಿಗಳಲ್ಲಿ ಕುಟುಂಬದ ಸಾಮಾಜಿಕ ಕಟ್ಟಳೆಗಳ ಮಿತಿಯೊಳಗಿನ ಕೆಲಸದಲ್ಲಿ ಭಾಗವಹಿಸುವಿಕೆ ಮುಂತಾದವು.

ಮಹಿಳೆಯ ದುಡಿಮೆ ಕುಟುಂಬಕ್ಕೆ ಅಗತ್ಯವಿದ್ದಾಗ ಅವಳು ಉದ್ಯೋಗಸ್ಥಳಾಗುವ ಸ್ಥಿತಿ ಇತ್ತು. ಕುಟುಂಬಕ್ಕೆ ನೆರವಾಗಲೆಂದು, ತಂದೆಯ ಆರ್ಥಿಕ ಮುಗ್ಗಟ್ಟು ಕಡಿಮೆಯಾಗಿಸಲು, ತಂದೆಯಿಲ್ಲದ ಕುಟುಂಬಕ್ಕೆ ದಿಕ್ಕಾಗಿ ತಮ್ಮ ತಂಗಿಯರಿಗೆ ದಾರಿದೀಪವಾಗಲು ಉದ್ಯೋಗ ಪಡೆದುಕೊಳ್ಳುವ ಸ್ತ್ರೀಯರು ಕಂಡುಬಂದಿದ್ದಾರೆ. ಅದು ಅವರ ಆಯ್ಕೆಯ ಬದುಕಲ್ಲ. ಮನೆಯ ದುಸ್ಥಿತಿ ಅವರನ್ನು ದುಡಿಮೆಗೆ ಹಚ್ಚುತ್ತದೆ. ಹಲವು ಶರತ್ತುಗಳ ಆಧಾರದ ಮೇಲೆ ಅವಳಿಗೆ ಹೊರ ಪ್ರಪಂಚಕ್ಕೆ ಹೋಗುವ ಅವಕಾಶ ಲಭ್ಯವಾಗಿತ್ತು. ಅವಳಿಂದ ಸಿಗುವ ಆರ್ಥಿಕತೆ ಒಪ್ಪಿದರೂ ಮೂಲ ವಿನ್ಯಾಸದಲ್ಲಿ ಬದಲಾವಣೆ ಬಂದಿಲ್ಲ. ಎಪ್ಪತ್ತರ ದಶಕದ ನಂತರದಲ್ಲಿ ಉದ್ಯೋಗಸ್ಥ ಮಹಿಳೆಗೂ ಗೌರವ ಲಭಿಸಲಾರಂಭಿಸಿತು. ವಿವಿಧ ಕ್ಷೇತ್ರದಲ್ಲಿ ಶಿಕ್ಷಣ, ಉದ್ಯೋಗದ ಅವಕಾಶ ತೆರೆದುಕೊಂಡವು.

ಎರಡು ದೋಣಿಯಲ್ಲಿ ಕಾಲಿಟ್ಟ ಸ್ಥಿತಿ ಉದ್ಯೋಗಿನಿ ಎದುರಿಸುವ ಪ್ರಮುಖ ಸವಾಲಾಗಿದೆ. ಆರಂಭದಲ್ಲಿ ಶಿಕ್ಷಣಕ್ಕೆ ಸಿಕ್ಕ ಪ್ರೋತ್ಸಾಹ ಉದ್ಯೋಗಕ್ಕೆ ಸಿಗಲಿಲ್ಲ. ಉದ್ಯೋಗಸ್ಥ ಮಹಿಳೆ ಖಾಸಗಿ ಬದುಕಿನಲ್ಲಿ ವಿಫಲರಾಗುತ್ತಾರೆ ಎಂಬ ನಂಬಿಕೆ ಇತ್ತು. ಉದಾಹರಣೆಗೆ ತ್ರೀವೇಣಿಯವರ ಸಾಹಿತ್ಯವನ್ನು ಹೆಸರಿಸಬಹುದು. ಹೆಣ್ಣಿನ ಶಿಕ್ಷಣಕ್ಕೆ ನೀಡಿದ ಒತ್ತನ್ನು ತ್ರಿವೇಣಿ ಉದ್ಯೋಗಕ್ಕೆ ನೀಡುವುದಿಲ್ಲ. ಇವರ ಅಪಸ್ವರ – ಅಪಜಯ ಕಾದಂಬರಿಗಳು ಉದ್ಯೋಗಸ್ಥ ಮಹಿಳೆ ತನ್ನ ಖಾಸಗಿ ಬದುಕಿನಲ್ಲಿ ಸಂಪೂರ್ಣವಾಗಿ ವಿಫಲವಾಗುವುದನ್ನು ಚಿತ್ರಿಸುತ್ತವೆ. ವೈದ್ಯೆಯಾಗುವ ಹಂಬಲವನ್ನು ಪೂರೈಸಿಕೊಂಡು ಹೆಸರುವಾಸಿಯಾದರೂ ಮೀರಾ ತನ್ನ ಕೌಟುಂಬಿಕ ನೆಲೆಯನ್ನು ಕಳೆದುಕೊಳ್ಳುತ್ತಾಳೆ. ಕೌಟುಂಬಿಕ ಮತ್ತು ಉದ್ಯೋಗ ಎಂಬ ಎರಡೂ ನೆಲೆಯನ್ನು ನಿಭಾಯಿಸಲು ಸ್ತ್ರೀ ಪ್ರಯತ್ನಪಡುವ ಮತ್ತು ಸೋಲುವ

ರೀತಿಯ ಚಿಂತನೆ ತ್ರಿವೇಣಿಯವರ ಕಾಲದಲ್ಲಿ ಇತ್ತು. ಆ ವಿನ್ಯಾಸ ಇಂದು ಬದಲಾಗುತ್ತಿದೆ. ಎರಡೂ ಕಡೆ ನ್ಯಾಯ ಕೊಡುವ ಸಂದಿಗ್ಧತೆ ಇಂದಿಗೂ ಇದ್ದರೂ, ಅವಳ ಕೌಟುಂಬಿಕ ಬದುಕು ವಿಫಲವಾಗದೆ ಸಾಗುತ್ತಿದೆ.

ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾವಲಂಬಿತ್ವಕ್ಕೆ ತನ್ನನ್ನು ತೆರೆದುಕೊಂಡ ಸ್ತ್ರೀ ಸಮುದಾಯದ ಹೊಸ್ತಿಲನ್ನು ದಾಟಿ ಹೊರಪ್ರಪಂಚಕ್ಕೆ ಬಂದಿತು. ಆದರೆ ಮನೆಯ ಒಳಗಿನ ದುಡಿಮೆಯ ನೊಗ ಅವಳ ಹೆಗಲಿಂದ ಇಳಿಯಲಿಲ್ಲ. ವೃತ್ತಿನಿರತ ಮಹಿಳೆಯ ಜರ್ಜರಿತವಾಗುತ್ತಿದ್ದಾಳೆ. ಎಲ್ಲ ಸಂದರ್ಭದಲ್ಲೂ ಉದ್ಯೋಗ ಅವಳ ಆರ್ಥಿಕ ಸ್ವಾವಲಂಬನೆಯಾಗಿ ಉಳಿದಿಲ್ಲ. ವೀಣಾ ಶಾಂತೇಶ್ವರರ 'ಅವಳ ಸ್ವಾತಂತ್ರ್ಯ' ಕತೆಯ ನಾಯಕಿ ವಿಮಲಾ ವೇದಿಕೆಯ ಮೇಲೆ ಪುರುಷ ದಬ್ಬಾಳಿಕೆಯನ್ನು ವಿರೋಧಿಸುವ, ಮಹಿಳೆಯರ ವಿಮೋಚನೆಯ ಪರವಾಗಿರುವ, ಸ್ತ್ರೀ ಶೋಷಣೆಯಿಂದ ಹೊರಬರಬೇಕು. ಪ್ರತಿಭಟಿಸಬೇಕು ಎಂಬ ನಿಲುವನ್ನು ಹೊಂದಿದ್ದು ವಾಸ್ತವದಲ್ಲಿ ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾವಲಂಬನೆ ಎಲ್ಲವೂ ಇದ್ದು ಏನೂ ಇಲ್ಲದ ಪರಿಸ್ಥಿತಿ ಹೊಂದಿರುವವಳು. ಮನೆಯ, ಮಕ್ಕಳ ಜವಾಬ್ದಾರಿಯ ಹೊರೆಯನ್ನು ತನ್ನ ಮೇಲೆ ಹೇರಿದ ಗಂಡನನ್ನು ವಿರೋಧಿಸಲಾಗದ ಅಸಹಾಯಕಳು. ಅವಳ ಸ್ವಾತಂತ್ರ್ಯದ ಹಂಬಲ ಮತ್ತು ವಾಸ್ತವ ಮುಖಾಮುಖಿಯಾಗಿ ಸ್ವಾತಂತ್ರ್ಯ ಎಂಬುದು ಅವಳಲ್ಲಿ ನಿಜವಾಗಿ ಮರೆಯಾಗಿ ಕೇವಲ ಭಾಷಣದಲ್ಲಿ ಮಾತ್ರ ಉಳಿದಿರುವ ದುರಂತ ಇಲ್ಲಿದೆ. "ಇನ್ಶೂರೆನ್ಸ್‌ಗೆ ಹಣ ತುಂಬುವುದು, ಮಳೆಗಾಲ, ಕಟ್ಟಿಗೆ, ಪಾಪುವಿನ ಜ್ವರ, ಮಾವನವರ ಹೊಟ್ಟೆ ನೋವು, ಅಡಿಗೆ, ಆಫೀಸು, ಲೋಕಲ್ ಟ್ರೇನು ...... ಯಾಕೋ ಕಣ್ಣಿಗೆ ಕತ್ತಲು ಬಂದಂತೆನಿಸಿ ಆಕೆ ಬಾಗಿಲಲ್ಲೇ ಕುಸಿದು ಕೂತಳು".[೧] "ಅವಳ ಸ್ವಾತಂತ್ರ್ಯ"ಕತೆಯು ಸಿದ್ಧಾಂತಕ್ಕೂ ಮತ್ತು ಬದುಕಿನ ವಾಸ್ತವಕ್ಕೂ ಇರುವ ಅಂತರ ಮತ್ತು ವ್ಯಂಗ್ಯವನ್ನು ಚಿತ್ರಿಸುತ್ತದೆ.

ದುಡಿಮೆಯ ಸಂಬಳವನ್ನು ಗಂಡನಿಗಿತ್ತು ಅವನಿಂದಲೇ ಖರ್ಚಿಗಿಷ್ಟು ಎಂದು ತೆಗೆದುಕೊಳ್ಳುವ ಸ್ತ್ರೀಯರು ನಮ್ಮೊಂದಿಗಿದ್ದಾರೆ. ಪುರುಷನ ದುಡಿಮೆಗೆ ಸಿಗುವ ಗೌರವ ಮಹಿಳೆಯ ದುಡಿಮೆಗೆ ಸಿಗುತ್ತಿಲ್ಲ. ದುಡಿದ ಹಣದ ಮೇಲೆ ಅಧಿಕಾರವೂ ಎಷ್ಟೋ ಸ್ತ್ರೀಯರಿಗಿಲ್ಲ. ಪುರುಷ ಪ್ರಧಾನತೆ ಹೆಣ್ಣಿನ ಆರ್ಥಿಕ ಸ್ವಾವಲಂಬತೆಯನ್ನು ನಿರಾಕರಿಸುತ್ತ ಬಂದಿದೆ. ಬೇಟೆ, ಮೀನುಗಾರಿಕೆ, ಪಶುಸಂಗೋಪನೆ, ಕೃಷಿ, ನೇಕಾರಿಕೆ, ಕುಂಬಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯ ಶ್ರಮ ಜಾಸ್ತಿ ಪ್ರಮಾಣದಲ್ಲಿ ಇರುತ್ತದೆ. ದುಡಿಮೆ ಪ್ರತಿಫಲ ಸಿಗಬೇಕಾದ ಅನಿವಾರ್ಯತೆ ಇದೆ. ದುಡಿಮೆಗೆ ಸಿಗಬೇಕಾದ ಪ್ರತಿಫಲ, ಸಮಯ, ಸ್ಥಾನ, ಬಿಡುವು ಮುಂತಾದ ಅಂಶಗಳ ಕುರಿತು ಚಿಂತನೆ ನಡೆಯುತ್ತಿದೆ.ಆದರೆ ಅನುಷ್ಠಾನಕ್ಕೆ ಬಂದಿಲ್ಲ. ಅವಳ ದುಡಿಮೆಯ ಮೇಲೆ ಅಧಿಕಾರ ಸ್ಥಾಪಿಸಲಾಗುತ್ತದೆ ಮತ್ತು ಅದನ್ನು ದುಡಿಮೆ ಅಲ್ಲ ಎಂದು ನಂಬಿಸಲಾಗುತ್ತದೆ. ಅವಳ ಕೆಲಸವನ್ನು ಭಾವನಾತ್ಮಕ ನೆಲೆಯಲ್ಲಿ ವಿಂಗಡಿಸಿ ಸೇವೆ ಮತ್ತು ಅವಳ ಕರ್ತವ್ಯ ಎಂಬ ಅರ್ಥ ಕಲ್ಪಿಸಲಾಗುತ್ತದೆ. ಈ ರೀತಿಯಲ್ಲಿ ಅವಳ ದುಡಿಮೆ ದಾಖಲಾಗುತ್ತಿಲ್ಲ. ಇದು ಲಿಂಗಪ್ರಜ್ಞೆ ಜಾಗೃತಿಗೊಳ್ಳದ ಸ್ಥಿತಿಯಾಗಿದೆ.

"ಮಹಿಳೆಯ ಉದ್ಯೋಗಕ್ಕೂ ಕುಟುಂಬದ ಆರ್ಥಿಕ ಚೇತರಿಸುವಿಕೆಗೂ ಇರುವಷ್ಟರ ಮಟ್ಟಿಗಿನ ನೇರ ಸಂಬಂಧ ಮಹಿಳೆಯ ಆರ್ಥಿಕ ಸ್ವಾತಂತ್ರ್ಯದೊಂದಿಗಿಲ್ಲ. ಹಾಗಾಗಿ ಇಂತಹ ಸೌಲಭ್ಯಗಳು ಕುಟುಂಬದ ನೆಲೆಯಲ್ಲಿ ಹೆಚ್ಚು ಉಪಯುಕ್ತವಾಗಬಹುದಾಗಿದ್ದು, ಅದರ ಅನುಷಂಗಿಕ ಅಂಶವಾಗಿ ಮಾತ್ರ ಮಹಿಳೆಯನ್ನು ತಲುಪಬಹುದು. ತಲುಪದೆ ಇರಲೂಬಹುದು. ಹಾಗಾಗಿ ಇದನ್ನು ಮಹಿಳಾ ಪರವಾದ ಸುಧಾರಿತ ಆರ್ಥಿಕತೆಯ ಲಕ್ಷಣವೆಂದು ಭಾವಿಸಲಾಗುವುದಿಲ್ಲ."[೨] ಉದ್ಯೋಗಸ್ಥಳಾಗಿ ಮನೆಯ ಆವರಣದ ಚೌಕಟ್ಟಿನಿಂದ ಹೊರನಡೆದರೆ ಅವಳಿಗೆ ಸ್ವಾತಂತ್ರ್ಯ ಸಿಗುತ್ತದೆ ಎಂಬ ಕಲ್ಪನೆಗಳು ಭ್ರಮೆಗಳು ತಮ್ಮ ಟೊಳ್ಳನ್ನು ತೋರಿಸುತ್ತವೆ. ಆದರ್ಶ ಮತ್ತು ವಾಸ್ತವದ ನಡುವಿನ ಅಂತರ ಅವಳ ಸ್ವಾತಂತ್ರ್ಯ ಮತ್ತು ದುಡಿಮೆಯಲ್ಲಿ ಇಲ್ಲ ಎಂಬುದು ಗೋಚರವಾಗುತ್ತದೆ. ಅವಳು ಉದ್ಯೋಗಸ್ಥೆಯಾದರೆ ಸಾಲದು ತನ್ನ ದುಡಿಮೆಯ ಮೇಲೆ ನಿಯಂತ್ರಣ ಪಡೆದು ಆರ್ಥಿಕ ಸ್ವಾಲಂಬಿತ್ವ ಗಳಿಸಿದರೆ ಮಾತ್ರ ಸಾಧ್ಯ. ವೃತ್ತಿಯಲ್ಲಿ ಗಂಡು-ಹೆಣ್ಣು ಎಂಬ ಜೈವಿಕತೆಗೆ ಅವಕಾಶ ನೀಡದೆ ವೃತ್ತಿಪರ ಮುಖವನ್ನು ಹೊಂದಿರುವ ವ್ಯಕ್ತಿತ್ವವನ್ನು ಆಧುನಿಕ ಉದ್ಯೋಗ ವ್ಯವಸ್ಥೆ ನಿರೀಕ್ಷಿಸುತ್ತದೆ. ಈ ಜೈವಿಕ ನೆಲೆಯಿಂದ ಆಚೆ ಯೋಚನೆ ಮಾಡುವ, ವೃತ್ತಿಪರ ನಿರತ ಮಹಿಳೆಯರ ದೃಢ ನಿರ್ಧಾರಗಳ ಚಿತ್ರಣ ನೇಮಿಚಂದ್ರರ ಕಥೆಗಳಲ್ಲಿ ಕಂಡುಬರುತ್ತದೆ. ನೇಮಿಚಂದ್ರರ 'ಬದುಕು ಕಾಯುವುದಿಲ್ಲ' ಕತೆಯ ಸಂಯುಕ್ತಾ ಹೊರಗೆ ದುಡಿಯುವ ಸ್ತ್ರೀಗೆ ಮನೆಯ ಕೆಲಸಗಳಿಗೆ ಗಂಡನ ಸಹಕಾರದ ಅಗತ್ಯವಿದೆ ಎಂದು ಮನೆ, ಮಗು, ಕುಟುಂಬ ಸಂಬಂಧಗಳಿಗೆ ಅವನು ಸಮಯ ನೀಡಬೇಕಿರುವ ತುರ್ತಿನತ್ತ ಗಮನ ಸೆಳೆಯುತ್ತಾಳೆ. ಒತ್ತಡದ, ವೇಗದ, ಅವಸರದ, ಸಮಯದ ಅಭಾವ ಎದುರಿಸುತ್ತಿರುವ ಉದ್ಯೋಗಸ್ಥ ಸ್ತ್ರೀಯರ ದೈನಂದಿನ ಮಿಡಿತಗಳು ಎದುರಿಸಲೇಬೇಕಾದ ಸನ್ನಿವೇಶಗಳು ನೇಮಿಚಂದ್ರರ ಕಥೆಗಳಲ್ಲಿ ಮೇಲಿಂದ ಮೇಲೆ ಕಂಡುಬರುತ್ತವೆ.

"ಒಳಗಿನ ದುಡಿಮೆಯ ಕ್ಷೇತ್ರಗಳನ್ನು ಗಂಡು ಮತ್ತು ಹೆಣ್ಣು ಮುಕ್ತವಾಗಿ ಹಂಚಿಕೊಳ್ಳುವುದು ಅವರಿಬ್ಬರ ಆರೋಗ್ಯಕ್ಕೂ ತನ್ಮೂಲಕ ಸಮಾಜದ ಆರೋಗ್ಯಕ್ಕೂ ಅವಶ್ಯಕವಾಗಿದೆ. ಈ ವಿನಿಮಯ, ಸಾಹಚರ್ಯ ಹೆಚ್ಚಿದಂತೆ ಹೆಂಗಸಿಗೆ ಸಂಬಂಧಿಸಿದಂತೆ ಇರುವ ಅರ್ಥಹೀನ, ಜೀವ ವಿರೋಧಿ ಮೌಲ್ಯಗಳು ಕುಸಿದು ಹೊಸ ಮಹಿಳೆಯ,ಹೊಸ ಮನುಷ್ಯನ ಹೊಸ ಚರಿತ್ರೆಯ ಪುಟಗಳಿಗೆ ದಾರಿಯಾಗುತ್ತದೆ"[೩]ಎಂಬ ವಿಜಯಾದಬ್ಬೆಯವರ ಆಶಯ ಪ್ರಸ್ತುತವಾದದ್ದು, ಪ್ರಧಾನ, ಅಧೀನ ಎಂಬ ತಾರತಮ್ಯ ಅಳಿದು ಜೊತೆಯಲ್ಲಿ ಹಾಕುವ ಹೆಜ್ಜೆ ಹೊಸ ಸಮಾಜವನ್ನು ನಿರ್ಮಿಸಬಲ್ಲದು.

ಹೆಣ್ಣಿನ ಅಸ್ಮಿತೆ ಕಟ್ಟುವಲ್ಲಿ ಆರ್ಥಿಕ ಸ್ವಾವಲಂಬನೆ ಅತಿ ಅಗತ್ಯ. ಇದು ಸ್ತ್ರೀ ಅಸ್ಮಿತೆಯ ರಕ್ಷಣೆಯ ಮುಖ್ಯ ಆಧಾರ ಸ್ತಂಭ ಆಗಿದೆ. ಅಧೀನತೆ ಅವಳೊಳಗೆ ಇರುವ ಆತ್ಮವಿಶ್ವಾಸದ ಪರಿಚಯ ಮಾಡಿಸಲಾರದು. ಆರ್ಥಿಕ ಅವಲಂಬನೆ ಇದ್ದಾಗ ಸ್ವಂತಿಗೆ ಮೂಡುವುದು ಸಾಧ್ಯವಿಲ್ಲ. ಸ್ವಾವಲಂಬನೆಯ ಆತ್ಮವಿಶ್ವಾಸ ನೀಡುವ ಧೈರ್ಯ ಮತ್ತು ಆರ್ಥಿಕತೆಯ ಅವಲಂಬನೆ ನಡುವೆ ಅಗಾಧವಾದ ಕಂದರ ಇದೆ. ಅವಲಂಬನೆ ವಿಧೇಯತೆಯನ್ನು ನಿರೀಕ್ಷಿಸಿದರೆ ಸ್ವಾವಲಂಬನೆ ಸ್ವಂತ ಚಹರೆಯನ್ನು ಹುಟ್ಟಿಸುತ್ತದೆ. ಸಂಸಾರದ ಅನ್ಯೂನ್ಯತೆಯಲ್ಲಿ ಆರ್ಥಿಕತೆ ಆತಂಕ ಇಲ್ಲದೆ ಸ್ಥಿತಿ ಇದ್ದಾಗ, ತನಗೆ, ಬೇಕಾದುದ್ದನ್ನು ಬೇರೆಯವರ ಅಪ್ಪಣೆ ಕಾಯದೆ ಕೊಂಡುಕೊಳ್ಳುವ ಶಕ್ತಿ ಇದ್ದಾಗಲಿನ ಪ್ರಶ್ನೆ ಬೇರೆ. ಅದು ಕೃಷಿ, ಉದ್ಯೋಗದ ವೇತನ, ಪತಿಯ ಆಸ್ತಿ ಬಳಕೆ ಮುಂತಾದವು ಯಾವುದಾದರೂ ಇರಬಹುದು. ಆರ್ಥಿಕ ಶಕ್ತಿ ಸಂಪೂರ್ಣ ವ್ಯಕ್ತಿತ್ವಕ್ಕೆ ಹೊಳಪು ನೀಡುತ್ತದೆ. ನೇಮಿಚಂದ್ರರ "ಕಪ್ಪು ಮೋಡ, ಬೆಳ್ಳಿ ಅಂಚು" ಕಥೆ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವಷ್ಟು ಪತಿಯ ಮೇಲೆ ಭೌತಿಕ ಹಾಗೂ ಮಾನಸಿಕ ಸ್ಥಿತಿಯ ಅವಲಂಬನೆ ಹೊಂದಿರುವ ಸ್ತ್ರೀಯರಿಗೆ ಎಚ್ಚರಿಕೆಯಂತಿದ್ದು, ಹೆಣ್ಣು ಆರ್ಥಿಕವಾಗಿ ಸ್ವತಂತ್ರಳು ಆಗಲೇಬೇಕಾದ ಅನಿವಾರ್ಯದತ್ತ ಮುಖಮಾಡುತ್ತದೆ. ದಶಕದ ದಾಂಪತ್ಯವನ್ನು ತಿರಸ್ಕರಿಸಿ, ಪತ್ನಿ, ಮಗಳನ್ನ ತೊರೆದು ರವಿ ಇನ್ನೊಂದು ವಿವಾಹವಾಗುತ್ತಾನೆ. ವೈವಾಹಿಕ ಬದುಕು ಒಮ್ಮೆಲೆ ಜಾರಿ ದಿಗ್ಭ್ರಮೆಯ ಬದುಕಿಗೆ ಮಧುವನ್ನು ಕರೆದೊಯ್ಯುತ್ತದೆ. ಒಂದು ರೀತಿಯ ಜೀವನ ಕ್ರಮಕ್ಕೆ ಒಗ್ಗಿದ ದೇಹ ಮತ್ತು ಮನಸ್ಸು ನಿರಾಸಕ್ತಿ,

ಸೋಮಾರಿತನಕ್ಕೆ ಒಳಗಾಗಿ ಸುಲಭಕ್ಕೆ ಶ್ರಮಜೀವನಕ್ಕೆ ಒಗ್ಗಲಾರದು. ಆಸಕ್ತಿ ಸ್ವಾವಲಂಬಿತ್ವ ತಾನೇ ಹುಟ್ಟಬೇಕೆ ವಿನಹ ಬೇರೊಬ್ಬರು ಎಷ್ಟು ಪ್ರಯತ್ನಪಟ್ಟರೂ ಮನಸ್ಸಿನಾಳಕ್ಕೆ ಇಳಿಯದು.

ವಿಚ್ಛೇದಿತ ಪತಿ ನೀಡುವ ಜೀವನಾಂಶದಲ್ಲಿ ಬದುಕು ಸಾಗಿಸುತ್ತಿದ ಮಧು ನಿಧಾನವಾಗಿ ತನ್ನ ಜೀವನ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಅವಲಂಬಿತ ಸ್ತ್ರೀತ್ವದಿಂದ ಸ್ವಾವಲಂಬನೆಯೆಡೆಗಿನ ಚಲನೆಗೆ ಉದಾಹರಣೆಯಾಗುತ್ತಾಳೆ. ಸುಂದರ ಸಂಸಾರದ ಕಲ್ಪನೆಯಲ್ಲಿದ್ದ ಮಧುವಿಗೆ ಗಂಡ ನೀಡಿದ ವಿಚ್ಛೇದನ ವಾಸ್ತವದತ್ತ ಎಳೆದೊಯ್ದು ತನ್ನ ಮತ್ತು ಮಗಳ ಭವಿಷ್ಯಕ್ಕಾಗಿ ಹವ್ಯಾಸಕ್ಕಾಗಿ ಕಲಿತ ಹೊಲಿಗೆಯನ್ನು ವಸ್ತ್ರ ವಿನ್ಯಾಸದ ವೃತ್ತಿಯಾಗಿ ಪರಿವರ್ತಿಸಿ ಆತಂಕವಿಲ್ಲದೆ ಬದುಕನ್ನು ಎದುರಿಸುವ ಛಲ ನೀಡುತ್ತದೆ.

ಅವನ ನಿರಾಕರಣೆಯಿಂದ ನಾಶವಾಗಬಹುದಾಗಿದ್ದ ಮಧು ಮತ್ತು ಅವಳ ಮಗಳ ಬದುಕು, ಅವನ ಅಭಾವದಿಂದ ಹೊಸ ನೆಲೆಯಲ್ಲಿ ಕಟ್ಟಿಕೊಳ್ಳುವ ಆಯಾಮದತ್ತ ಚಲಿಸುತ್ತದೆ. ಸುರಕ್ಷಿತ ಚಿಪ್ಪೊಡೆದು ಬಂದಾಗ ಜಗತ್ತನ್ನು ಎದುರಿಸಲು ಅಭದ್ರತೆ, ಗುರಿ, ದಾರಿ ಯಾವುದು ಇಲ್ಲದ ಹೆಪ್ಪುಗಟ್ಟಿದ ವ್ಯಕ್ತಿತ್ವ, ಅಧೀನತೆಗೆ ಹೊರತಾದ ಬದುಕಿದೆ ಎಂಬ ಎಚ್ಚರವೂ ಇಲ್ಲದ ಅರೆಪ್ರಜ್ಞಾವಸ್ಥ ಸ್ಥಿತಿಯಿಂದ ಸ್ತ್ರೀಯರು ಹೊರಬರಬೇಕಾದ ಅನಿವಾರ್ಯತೆಯನ್ನು ಲೇಖಕಿ ಕಟ್ಟಿಕೊಡುತ್ತಾರೆ. ಅಪಮಾನಕ್ಕಿಂತ ಮನಸ್ಸಿನ ಚಾಲಕ ಶಕ್ತಿ ಇನ್ನೊಂದು ಒದಗಿ ಬರದು. ಸ್ವಾವಲಂಬನೆಯ ಬದುಕು ಈ ಆತ್ಮವಿಶ್ವಾಸದ ದಾಳಿಗಳನ್ನು ನೀಡಬಲ್ಲದು. ನೂರಾರು ಸಾಧ್ಯತೆಗಳ ಬದುಕನ್ನು ಹೊಂದಿಸಬಲ್ಲದು. ಆರ್ಥಿಕ ಸ್ವಾವಲಂಬನೆ ಎಂಬುದು ವಯಕ್ತಿಕ ಬಿಡುಗಡೆಯೂ ಹೌದು.

ಪುರುಷ ಪ್ರಧಾನ ಸಂಸ್ಕೃತಿ ರೂಪಿಸಿದ ಸಾಂಸ್ಕೃತಿಕ ರಾಜಕಾರಣ ಹೆಣ್ಣಿನ ಒಳಲೋಕದಲ್ಲಿ ತನ್ನ ಅಧಿಕೃತತೆಯ ಮೊಹರನ್ನು ಒತ್ತಿದೆ. 'ಉದ್ಯೋಗಂ ಪುರುಷ ಲಕ್ಷ್ಮಣಂ' ಚಾಲ್ತಿಯಲ್ಲಿದ್ದ ಮಾತು. ಉದ್ಯೋಗವಿಲ್ಲದೇ ಗೃಹಿಣಿತ್ವಕ್ಕೆ ಅಡಿಯಾಗಿರುವ ಸ್ತ್ರೀ ಯಾವ ಪ್ರಶ್ನೆಗಳನ್ನು ಎದುರಿಸಲಾರಳು. ಆದರೆ ಉದ್ಯೋಗವಿಲ್ಲದಿರುವ ಪುರುಷನನ್ನು ಸಮಾಜ ಒಪ್ಪಲಾರದು. ಗಂಡ ಮನೆಯಲ್ಲಿದ್ದು, ಗೃಹಿಣಿ ಕೆಲಸ ಮಾಡುವ ಉದಾಹರಣೆ ವಿರಳ. ಹೆಣ್ಣು ಮನೆಯ ಒಳಗೂ – ಹೊರಗೂ ದುಡಿದು ಮನೆ ನಡೆಸುವುದು ಸಾಮಾನ್ಯ ಸಂಗತಿ. ಗಂಡು ಹೆಣ್ಣು ಭೇದವಿಲ್ಲದೆ ಶ್ರಮ ವಿಭಜನೆ ಮಾಡುವ ಮತ್ತು ಪರಂಪರಾನುಗತವಾಗಿ ಬಂದ ಶ್ರಮ ವಿಭಜನೆ ಪರಿಕಲ್ಪನೆ ಬಗ್ಗೆ ಸಮಾಜದ ಮನಃಸ್ಥಿತಿ ಬದಲಾಗಬೇಕಾದ ಜರೂರಿದೆ.

ಸುನಂದಾರ ಆಧುನಿಕ ಮನಸ್ಥಿತಿಯ ಬದಲಾಗುತ್ತಿರುವ ಸ್ತ್ರೀ–ಪುರುಷ ಸಂಬಂಧದ ವಿನ್ಯಾಸಕ್ಕೆ ತಟ್ಟೆಯ 'ಕೊನೆ ಅಗುಳು' ಕತೆ ಉದಾಹರಣೆಯಂತಿದೆ. ಎರಡೂ ಬಗೆಯ ದುಡಿಮೆಯ ಒತ್ತಡದಲ್ಲಿ ಜರ್ಜರಿತಳಾಗುವ ಸ್ತ್ರೀ ಸಮುದಾಯಕ್ಕೆ ಆಧುನಿಕ ಮನಸ್ಸಿನ ಪತ್ನಿಯ ಕೆಲಸಗಳಿಗೆ ಪುರುಷರ ಬೆಂಬಲವೂ ಪರಿವರ್ತನೆಯ ಒಂದು ಭಾಗ. ಆದರೆ ಲೇಖಕಿ ಕಟ್ಟಿಕೊಡುವ ಪಾತ್ರದ ಚಿತ್ರಣದಲ್ಲಿ ಭಾರತೀಯ ಸಮಾಜದಲ್ಲಿ ಅತ್ಯಂತ ವಿರಳವಾಗಿ ಕಂಡುಬರುವ ಪುರುಷನ ಚಿತ್ರಣವಿದೆ. ಇಲ್ಲಿನ ಸ್ತ್ರೀ–ಪುರುಷ ಪಾತ್ರಗಳು ಅದಲು ಬದಲಾಗಿದ್ದು ಮನೆಯ ಎಲ್ಲ ಕೆಲಸವನ್ನೂ ಪುರುಷ ಮಾಡುತ್ತ ಸ್ತ್ರೀ ಉದ್ಯೋಗಸ್ಥಳಾಗಿ ಮನೆ ಸಂಭಾಳಿಸುವ ಚಿತ್ರಣವಿದೆ. ಇಲ್ಲಿನ ಸ್ತ್ರೀ ದಿಟ್ಟಳಾಗಿದ್ದು ಎರಡು ವರ್ಷದ ಸಹ ಜೀವನದ ನಂತರ ವಿವಾಹದ ಕುರಿತು ಯೋಚಿಸುವೆ ಎಂದು ಹೇಳುವ ಪ್ರಗತಿಪರ ಮನೋಭಾವದ ಗಟ್ಟಿಗಿತ್ತಿ. "ಒಂದು ಅನ್ನದ ಅಗುಳಿನ ಬೆಲೆ" ಮನೆಯಲ್ಲಿ ಕೂತಿರುವ ನಿನಗೇನು ಗೊತ್ತು?[೪] ಇಂತಹ ಮಾತನ್ನು ಪುರುಷನ ಬಾಯಿಂದ ಕೇಳುವ ಗೃಹಿಣಿ ಸಾಮಾನ್ಯವಾಗಿ ಕಥನಗಳಲ್ಲಿ ಮತ್ತು ವಾಸ್ತವದಲ್ಲಿ ಕಂಡು ಬರುತ್ತಾಳೆ ಆದರಲ್ಲಿ ಲೇಖಕಿ ಸ್ತ್ರೀ ಪಾತ್ರದ ಮೂಲಕ ಮನೆಯಲ್ಲಿರುವ ಪುರುಷನಿಗೆ ಹೇಳಿಸುವಲ್ಲಿ ಬದಲಾದ ಧೋರಣೆ ಕಂಡುಬರುತ್ತದೆ.

ಪ್ರೀತಿಯ ನೇಹಾಳ ಗದರುವಿಕೆಗೆ ಮೌನದ ಮೂಲಕ ಅನುಸಂಧಾನ ಮಾಡಿಕೊಂಡು ಅನೂಪ ಅವಳಿಗೆ ತಿಂಡಿ, ಊಟದ ಡಬ್ಬಿ ಕೊಟ್ಟು, ಅವಳ ಆಫೀಸಿನ ಬಸ್‌ಗೆ ಡ್ರಾಪ್ ಮಾಡಿ, ಮನೆಗೆ ಬಂದು ಉಳಿದ ಕೆಲಸ ಮಾಡುವಲ್ಲಿ ವಾಸ್ತವದಲ್ಲಿ ಕಂಡು ಬರುವ ಗೃಹಿಣಿಯ ಚಿತ್ರಣ ಪುರುಷನಲ್ಲಿ ಆವಾಹಿಸಲ್ಪಟ್ಟಿದೆ. ಬದುಕಿನ ಬಗೆಗಿನ ಪ್ರೀತಿ ಸುನಂದಾರ ಕಥೆಗಳಲ್ಲಿ ಎದ್ದು ಕಾಣುತ್ತಿದ್ದು ಮನುಷ್ಯ ಸಂಬಂಧಗಳ ಸೂಕ್ಷ್ಮಗಳನ್ನು ಎಳೆ ಎಳೆಯಾಗಿ ಇವರು ಬಿಚ್ಚಿಡುತ್ತಾರೆ. ದೈನಂದಿನ ಮಿಡಿತವನ್ನು ಮನೆಯ ಮತ್ತು ಮನದ ಒಳಸುಳಿಯ ಸಂಕೀರ್ಣ ಪದರವನ್ನು ಹೊಸ ದೃಷ್ಟಿಕೋನದಲ್ಲಿ ಮೀಟುತ್ತಾರೆ. ಅಹಂಕಾರ, ಅಹಂ ಎನ್ನುವುದು ಅಳಿಯುತ್ತ ಸಾಗಬೇಕಾದ ಪರಿಯನ್ನು ಸೃಷ್ಟಿಸುತ್ತಾರೆ.

೫೦ರ ದಶಕದಲ್ಲಿದ್ದ ಸ್ತ್ರೀಯನ್ನು ಪುರುಷ ದೃಷ್ಟಿಕೋನ ಅರ್ಥೈಸುವ ಭಾವ ಇಂದಿಗೆ ವಿಭಿನ್ನ ಸ್ವರೂಪವನ್ನು ಗಳಿಸಿದೆ. ಅಂದು ಹೊಸ್ತಿಲ ಒಳಗೆ ಸ್ತ್ರೀಯನ್ನು ಮುಚ್ಚಿಡುವ ಹುನ್ನಾರವಿತ್ತು. ಜೊತೆಯಲ್ಲಿ ಕೆಲಸಕ್ಕೆ ಬಾರದವಳು ಅಪ್ರಯೋಜಕಳು ಎಂಬ ತಿರಸ್ಕಾರವೂ ಇತ್ತು. ಹೊಸ್ತಿಲನ್ನು ದಾಟಲು ತನ್ನ ಅಸ್ತಿತ್ವವನ್ನು ಪ್ರಪಂಚದಲ್ಲಿ ಬಿಂಬಿಸಲು ಸ್ತ್ರೀ ಹಲವು ದಶಕಗಳು ಹೋರಾಡಿದ್ದಾಳೆ. ಇಂದಿನ ಶಿಕ್ಷಣ, ಉದ್ಯೋಗ, ಗೃಹಿಣಿತ್ವದ ನಡುವೆ ಮತ್ತೆ ಪುರುಷ ಸೃಷ್ಟಿತ ಮಾದರಿಗೆ ಒಳಗಾಗುತ್ತಿದ್ದಾಳೆ. ಉನ್ನತ ಶಿಕ್ಷಣ, ಉತ್ತಮ ಉದ್ಯೋಗ ಅವಳ ಕನಸಾಗಿ ಉಳಿದಿಲ್ಲ. ಇಂದು ಎಲ್ಲ ಸ್ತರಗಳಲ್ಲೂ ಮುಕ್ತ ಅವಕಾಶ ಲಭ್ಯವಿದೆ. ಆದರೆ ಉದ್ಯೋಗದ ಜೊತೆಯಲ್ಲಿ ಗೃಹಿಣಿತ್ವವನ್ನು ಸಮತೋಲದಿಂದ ತೂಗಿಸುವಿಕೆಯನ್ನು ಸ್ತ್ರೀಯಿಂದ ನಿರೀಕ್ಷಿಸಲಾಗುತ್ತಿದೆ. ಸಮಾಜದ ಈ ಅಪೇಕ್ಷೆಯಿಂದ ಹೊರಗೆ ಬರಲು ಸ್ತ್ರೀ ಅಂಜುತ್ತಿದ್ದಾಳೆ.

ಉದ್ಯೋಗ ಆರ್ಥಿಕವಾಗಿ ಗಳಿಕೆ ನೀಡುತ್ತಿದೆಯೆ? ಬದಲಾಗಿ ಆರ್ಥಿಕ ಸ್ವಾವಲಂಬನೆಯನ್ನೆ? ಎಂಬ ಪ್ರಶ್ನೆಗೆ ಉತ್ತರ ಬಹಳ ಸಂಕೀರ್ಣವಾದುದು. ಸಮಾಜ ನಿರೀಕ್ಷಿತ ಸ್ಥಾಪಿತ ಮಹಿಳಾ ಮಾದರಿಯ ಜವಾಬ್ದಾರಿ ನಿರ್ವಹಣೆಯೊಂದಿಗೆ ದುಡಿಮೆ ಕೂಡ ಸೇರ್ಪಡೆಯಾಗುತ್ತಿದೆ. ಅಡುಗೆಯಿಂದ ಹಿಡಿದು ಮನೆಯ ಪ್ರತಿ ಕೆಲಸವೂ ಸ್ತ್ರೀ ಮಾಡುತ್ತಿದ್ದಾಗ 'ಯಕಶ್ಚಿತ್' ಎನಿಸುತ್ತದೆ. ಆಹಾರ ಉತ್ಪಾದನೆ ಎಂಬುದು ಉದ್ಯಮವೆನಿಸಿದಾಗ ಅಲ್ಲಿಯೂ ಪುರುಷರ ಸ್ವಾಮ್ಯವೇ ಕಂಡುಬರುತ್ತದೆ. ಮನೆಕೆಲಸದ ಶ್ರಮವನ್ನು 'ಉತ್ಪಾದಕ ದೃಷ್ಟಿ' ಯಿಂದ ನೋಡಬೇಕು. ದುಡಿಮೆಗೆ ಬೆಲೆ ನಿಗದಿಯಾಗಬೇಕೆಂಬ ಸ್ತ್ರೀವಾದಿ ಪ್ರತಿಪಾದನೆಗೆ ಇಂದಿಗೂ ಮಾನ್ಯತೆ ದೊರೆತಿಲ್ಲ. ಲಿಂಗಾಧಾರಿತ ನಿರೀಕ್ಷೆಗಳು, ಸಮಾಜದ ರಚನೆಗಳು ಮಹಿಳೆಯನ್ನು ನಿಯಂತ್ರಿಸುತ್ತದೆ. ಸಾಮಾಜಿಕ ಅಸ್ತಿತ್ವದ ಹೋರಾಟ ಮತ್ತು ತೊಳಲಾಟದಲ್ಲಿ ಮುಂದುವರಿಯುತ್ತಿದೆ. ಗೃಹಿಣಿಯ ದುಡಿಮೆಗೆ ಸಮಾನ ಗೌರವ ಸಿಗುತ್ತಿಲ್ಲ. ಗೃಹಿಣಿಯಾಗಿ ಸಂಬಳರಹಿತ ದುಡಿಮೆ, ಉದ್ಯೋಗಿನಿಯಾಗಿ ಸಂಬಳಸಹಿತ ದುಡಿಮೆಯ ಚೌಕಟ್ಟಿನ ನಡುವೆ ಒತ್ತಡ ವಿಸ್ತಾರತೆ ಪಡೆದುಕೊಳ್ಳುತ್ತಿದೆ. ಕೌಟುಂಬಿಕ ಜವಾಬ್ದಾರಿ ಪುರುಷನೂ ನಿರ್ವಹಿಸಬಲ್ಲ ಎಂಬ ಅರಿವಿನ ಕೊರತೆ, ಮನೆಯ ಸದಸ್ಯರು ತನ್ನ ಕಷ್ಟಗಳನ್ನು ಅರ್ಥಮಾಡಿಕೊಳ್ಳವವರು ಎಂಬ ನಿರೀಕ್ಷೆ ನಿಲ್ಲಿಸಿ ಸ್ತ್ರೀ ಕುಟುಂಬದೊಂದಿಗೆ ಸಮಾಲೋಚನೆ ನಡೆಸಬೇಕು. ಪರಾವಲಂಬಿ ಆಗದೆ ಸ್ವಾವಲಂಬತ್ವದಿಂದ ತನಗೆ ಬೇಕಿರುವುದನ್ನು ಪಡೆದುಕೊಳ್ಳುವ ಆತ್ಮವಿಶ್ವಾಸ ಮಹಿಳೆಯಲ್ಲಿ ಮೂಡುತ್ತಿರುವ ಸಂದರ್ಭ ಮತ್ತು ಮುಂದಿನ ದಾರಿಯ ಹೊಳಹುಗಳನ್ನು ನೀಡುವ ಕಾರ್ಯ ಆರಂಭವಾಗಿದೆ.

**ಕೊನೆಟಿಪ್ಪಣಿಗಳು**

1. ಶಾಂತೇಶ್ವರ.ವೀಣಾ ೨೦೦೬, ನಡೆದದ್ದೇ ದಾರಿ (ಸಮಗ್ರ ಕಥನ ಸಾಹಿತ್ಯ), ಸುಂದರ ಪುಸ್ತಕ ಪ್ರಕಾಶನ ಧಾರವಾಡ, ಪು ೧೭೧.
2. ಶ್ರೀಮತಿ. ಎಚ್.ಎಸ್, ವಿರಕ್ತಮಠ.ಎನ್. ಶಿವಾನಂದ, ಕೃಷ್ಣ.ಜೆ (ಸಂ) ೨೦೦೭, ಮಹಿಳೆ, ದುಡಿಮೆ ಮತ್ತು ಬಿಡುವು, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವಿದ್ಯಾಲಯ ಹಂಪಿ, ಪು ೭೦.
3. ಕಡಮೆ. ಪ್ರಕಾಶ. ಸುನಂದಾ, ೨೦೧೬, ತುದಿ ಮಡಚಟ್ಟು ಪುಟ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ಪು.೭೩.
4. ಸೋಂದಾ ಚಂದ್ರಮತಿ, ೨೦೧೦, ಶಬ್ಧದೊಳಗಣ ನಿಶ್ಯಬ್ದ, ಜ್ಯೋತಿ ಪ್ರಕಾಶನ, ಮೈಸೂರು, ಪು ೩೭.

**ಪರಾಮರ್ಶನ ಗ್ರಂಥಗಳು**


1. ದಬ್ಬೆ ವಿಜಯಾ, ೧೯೯೭, ನಾರಿ – ದಾರಿ – ದಿಗಂತ, ರಚನಾ ಪ್ರಕಾಶನ, ಮೈಸೂರು.
2. ಕಡಮೆ. ಪ್ರಕಾಶ. ಸುನಂದಾ, ೨೦೧೬, ತುದಿ ಮಡಚಟ್ಟು ಪುಟ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
3. ನೇಮಿಚಂದ್ರ, ೨೦೧೬, ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು,ಅಂಕಿತ ಪುಸ್ತಕ, ಬೆಂಗಳೂರು,
4. ಶಾಂತೇಶ್ವರ.ವೀಣಾ ೨೦೦೬, ನಡೆದದ್ದೇ ದಾರಿ (ಸಮಗ್ರ ಕಥನ ಸಾಹಿತ್ಯ), ಸುಂದರ ಪುಸ್ತಕ ಪ್ರಕಾಶನ ಧಾರವಾಡ.
5. ಶ್ರೀಮತಿ. ಎಚ್.ಎಸ್, ವಿರಕ್ತಮಠ.ಎನ್. ಶಿವಾನಂದ, ಕೃಷ್ಣ.ಜೆ (ಸಂ) ೨೦೦೭, ಮಹಿಳೆ, ದುಡಿಮೆ ಮತ್ತು ಬಿಡುವು, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವಿದ್ಯಾಲಯ ಹಂಪಿ.
6. ಸೋಂದಾ ಚಂದ್ರಮತಿ, ೨೦೧೦, ಶಬ್ಧದೊಳಗಣ ನಿಶ್ಯಬ್ದ, ಜ್ಯೋತಿ ಪ್ರಕಾಶನ, ಮೈಸೂರು.